# ಭಾರತದ ಶಕ್ತಿ ಮತ್ತು ದೌರ್ಬಲ್ಯ

ನಮ್ಮ ಪ್ರಧಾನಿ ನರೇಂದ್ರ ಮೋದಿಯವರು ಅಮೆರಿಕ ಪ್ರವಾಸದಲ್ಲಿದ್ದಾಗ ಮ್ಯಾಡಿಸನ್ ಚೌಕದಲ್ಲಿ ಭಾರತೀಯ ಸಂಜಾತ ಅಮೆರಿಕನ್ನರನ್ನುದ್ದೇಶಿಸಿ ಭಾರತದ ಮೂರು ಮುಖ್ಯ ಶಕ್ತಿಗಳನ್ನು ಗುರುತಿಸಿ ಭಾಷಣ ಮಾಡಿದರು. ಅವುಗಳು; ಪ್ರಜಾಸತ್ತೆ, ಜನಸಂಖ್ಯೆ ಮತ್ತು ಮಾರುಕಟ್ಟೆ ಬೇಡಿಕೆ. ಅವರೇ ಹೇಳಿಕೊಳ್ಳುವಂತೆ ವ್ಯಾಪಾರ ಚತುರತೆ ಪ್ರತಿ ಗುಜರಾತಿಯ ರಕ್ತದಲ್ಲೂ ಇದೆ. ಆದ್ದರಿಂದ ಇದೊಂದು ಶುದ್ಧ ವ್ಯಾಪಾರಿಯ ಒಳನೋಟ ಎನ್ನಬಹುದು. ಕೆಲವು ವರ್ಷಗಳ ಹಿಂದೆ ಖ್ಯಾತ ಸುದ್ದಿ ವಿಶ್ಲೇಷಕ ಪ್ರಣಯ್ ರಾಯ್ ತಮ್ಮ ವಾಹಿನಿಯಲ್ಲಿ ಅರ್ಥಶಾಸ್ತ್ರಜ್ಞ ಡಾ. ಅಮರ್ತ್ಯಸೇನ್ ಮತ್ತು ಇನ್ಫೋಸಿಸ್ ಸ್ಥಾಪಕ ಅಧ್ಯಕ್ಷ ನಾರಾಯಣಮೂರ್ತಿಯವರನ್ನು ಭಾರತದ ಮೂರು ಮುಖ್ಯ ವಿಷಯಗಳನ್ನು ಕುರಿತು ಹೇಳುವಂತೆ ಕೇಳಿದ್ದರು. ನನ್ನ ಶಿಥಿಲ ನೆನಪಿನಿಂದ ಅದನ್ನು ದಾಖಲಿಸುವುದಾದರೆ ಅಮರ್ತ್ಯಸೇನ್ ಉತ್ತರವಾಗಿ ಭಾರತದಲ್ಲಿ 1) ಪ್ರಜಾತಂತ್ರ ವ್ಯವಸ್ಥೆ ಇದೆ 2) ಮಾನವ ಸಂಪನ್ಮೂಲವಿದೆ 3) ಮತ್ತು ಅಸಮಾನತೆ ಇದೆ. ಅದರ ಬಗ್ಗೆ ನಾವು ನಾಚಿಕೆ ಪಟ್ಟುಕೊಳ್ಳಬೇಕು ಎಂದು ಹೇಳಿದ್ದರು. ನಾರಾಯಣಮೂರ್ತಿಯವರು ಉತ್ತರಿಸುತ್ತಾ ಹೀಗೆ ಹೇಳಿದ್ದರು. 1) ನಮ್ಮಲ್ಲಿ ಪ್ರಜಾಪ್ರಭುತ್ವವಿದೆ 2) ಸಂಪನ್ಮೂಲವಿದೆ 3) ಮತ್ತು ಯುವಶಕ್ತಿ ಇದೆ. ಇವರಿಬ್ಬರ ನಡುವಿನ ಸಾಮ್ಯ ಮತ್ತು ವ್ಯತ್ಯಾಸ ಕುತೂಹಲಕಾರಿಯಾಗಿದೆ.

ಒಬ್ಬ ಸಾಮಾಜಿಕ ವಿಜ್ಞಾನಿಯೂ ಆಗಿ ಅಮರ್ತ್ಯಸೇನ್‌ರವರ ಕಾಳಜಿ ಅಪೂರ್ವವಾದುದು. ಅವರು ಯುವಶಕ್ತಿಯನ್ನು ಕಡೆಗಣಿಸುತ್ತಿದ್ದಾರೆ ಎಂದರ್ಥವಲ್ಲ. ಭಾತರದಲ್ಲಿ ಒಂದು ರೀತಿಯ ಅಸಮಾನತೆ ಅಲ್ಲ, ಹಲವು ರೀತಿಯ ಅಸಮಾನತೆಗಳಿವೆ. ಆರ್ಥಿಕ ಅಸಮಾನತೆ, ರಾಜಕೀಯ ಅಸಮಾನತೆ, ಸಾಮಾಜಿಕ ಅಸಮಾನತೆ, ಜಾತಿ ಅಸಮಾನತೆ ಇತ್ಯಾದಿ. ನಮ್ಮ ಆಸಕ್ತಿ ಕೇಂದ್ರವೆಲ್ಲವೂ ಆರ್ಥಿಕ ಅಭಿವೃದ್ಧಿಯ ಕಡೆಗಷ್ಟೆ ಇದ್ದರೆ ಅದು ಒಮ್ಮುಖ ಚಲನೆಯಾಗುತ್ತದೆ. ಸಾಮಾಜಿಕ ಅಸಮಾನತೆ ಇದ್ದಷ್ಟೂ ಒಳಗೊಳ್ಳುವಿಕೆ ಅಸಾಧ್ಯ. ಒಳಗೊಳ್ಳುವಿಕೆ ಇಲ್ಲದ ಆರ್ಥಿಕ ಅಭಿವೃದ್ಧಿ ಅಸಮತೋಲನಕ್ಕೆ ಕಾರಣವಾಗುತ್ತದೆ. ಎಲ್ಲರನ್ನೂ ಒಳಗೊಂಡ ಅಭಿವೃದ್ಧಿ ಮಾದರಿಗಳನ್ನು ಸಮಾಜ ಶಾಸ್ತ್ರಜ್ಞರು ಸರ್ಕಾರಕ್ಕೆ, ಆಳುವ ವರ್ಗಕ್ಕೆ ಮನವರಿಕೆ ಮಾಡಿಕೊಡಬೇಕಾಗುತ್ತದೆ. ಒಬ್ಬ ವ್ಯಕ್ತಿಯಾಗಲೀ ಒಂದು ಸಮಾಜವಾಗಲೀ ಸರ್ವಾಂಗ ಸಮಬಲವಾಗಿದ್ದರೆ ನೋಡಲು ಚೆನ್ನ. ಅಸಹಜ ಬೆಳವಣಿಗೆಯನ್ನು ನೋಡಲು ಯಾರಿಗಾದರೂ ಮುಜುಗರವೆನಿಸುತ್ತದೆ. ಹೊಟ್ಟೆ ದಪ್ಪವಾಗಿದ್ದು ಕಾಲುಗಳು ಕೃಶವಾಗಿದ್ದರೆ ಅಥವಾ ದಪ್ಪ ತಲೆಯುಳ್ಳ ವ್ಯಕ್ತಿಗೆ ಸಣಕಲು ದೇಹವಿದ್ದರೆ ನೋಡಲು ವಿಕಾರವೆನಿಸುತ್ತದೆ. ಆದ್ದರಿಂದ ನಮ್ಮ ರಾಜಕಾರಿಣಿಗಳು ಭಾರತದ ಅಭಿವೃದ್ಧಿ ಮಾನದಂಡಗಳನ್ನು ಅಮರ್ತ್ಯಸೇನ್‌ರ ಹೇಳಿಕೆಯ ಹಿನ್ನೆಲೆಯಲ್ಲಿ ಪರಾಮರ್ಶಿಸಬೇಕಾಗುತ್ತದೆ.

ಪ್ರಸ್ತುತ ಸಾಮಾಜಿಕ ಅಸಮಾನತೆಯ ವಿರುದ್ಧ ಒಂದು ಆಂದೋಲನವನ್ನೇ ಸಾರಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅವಶ್ಯಕತೆಯಿದೆ. ಮುಖ್ಯವಾಗಿ ಶಿಕ್ಷಣ ರಂಗದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರಬೇಕಾಗಿದೆ. ನಮ್ಮ ಮಕ್ಕಳು ಯಾವುದೇ ಭೇದ ಭಾವವಿಲ್ಲದೆ ಒಬ್ಬರನ್ನೊಬ್ಬರು ಪ್ರೀತಿಸುವ, ಒಡನಾಡುವ, ಗೌರವಿಸುವ ಮನೋಭಾವವನ್ನು ಕಲಿಸಬೇಕಾಗಿದೆ. ಇದು ಗ್ರಾಮೀಣ ಭಾಗದಲ್ಲಿ ಹೆಚ್ಚು ಹೆಚ್ಚು ಆಗಬೇಕಾಗಿದೆ. ಜಾತಿ ಕಾರಣದಿಂದಾಗಿ ಇರುವ ಅಸಮಾನತೆ ಬಾಬಾಸಾಹೇಬ್ ಅಂಬೇಡ್ಕರ್ ಹೇಳುವಂತೆ ಕೆಳಮುಖ ಹರಿವ ದ್ವೇಷವಾಗಬಾರದು (descending order of contempt). ನಾವು ಹುಟ್ಟಿದ ಕಾರಣದಿಂದಾಗಿಯೆ ನಮ್ಮ ದೇಶ ನಮಗೆ ಇತರ ದೇಶಗಳಿಗಿಂತ ಹೆಚ್ಚು ಚೆಂದ. ಅದಕ್ಕಾಗಿ ಭಕ್ತಿ. ಜಾತಿನಾಮದಲ್ಲಿ ದೇಶವಾಸಿಗಳನ್ನು ದ್ವೇಷಿಸಿ, ಅವಮಾನಿಸಿ, ಕೀಳಾಗಿ ಕಂಡು ನಾವು ದೇಶಭಕ್ತಿಯನ್ನು ಮೆರೆಯುವುದಾದರೂ ಹೇಗೆ? ನಮ್ಮ ನಡುವೆಯೆ ಬದುಕುವ ದೇಶದ ಜನಗಳಿಗೆ ಮಾಡುವ ಅವಮಾನ ದೇಶಕ್ಕೆ ಮಾಡುವ ಅವಮಾನ ಎಂದು ಎಳೆಯ ಹಂತದಲ್ಲಿಯೆ ಮಕ್ಕಳಿಗೆ ತಿಳಿಹೇಳಬೇಕು. 'ಬೆಳೆವ ಸಿರಿ ಮೊಳಕೆಯಲಿ' ಎಂಬಂತೆ ಇದು ಹೊಸ ವಿಚಾರಗಳನ್ನು ಮೈಗೂಡಿಸಿಕೊಳ್ಳುವ ವಯಸ್ಸು. ಯಾವುದೋ ಕಾರಣದಿಂದ ಭಾರತದೊಳಗೆ ಜಾತಿ ಹುಟ್ಟಿಕೊಂಡಿತು. ಅದು ಅಸಹಜವಾದದ್ದು, ಅನೈಸರ್ಗಿಕವಾದದ್ದು, ಶ್ರೇಣೀಕೃತ ಅಸಮಾನತೆ ಅವಹೇಳನಕಾರಿಯಾದದ್ದು ಎಂಬುದನ್ನು ತಿಳಿದರೆ ಶಾಲೆಯಲ್ಲಿ ಬಿಸಿಯೂಟದ ಸರತಿಯಲ್ಲಿ ಒಟ್ಟಿಗೆ ಕುಳಿತು ಊಟ ಮಾಡುವರು. ಕಾಲೇಜು ಮೆಟ್ಟಿಲು ಹತ್ತಿದಾಗ ಜಾತಿ ಗುಂಪುಗಳನ್ನು ಕಟ್ಟಿಕೊಳ್ಳುವುದಿಲ್ಲ. ವಯಸ್ಕರಾದಾಗ ಪ್ರಬುದ್ಧತೆಯನ್ನು ಪಡೆದು ಯೋಗ್ಯರಿಗೆ ಮಾತ್ರ ಮತ ನೀಡುವರು. ಮುಂದೆ ತಮ್ಮ ಮಕ್ಕಳು ಅನ್ಯಜಾತಿಯವರನ್ನು ವರಿಸಿದರೆ ಹೆತ್ತವರಾಗಿ ಅವರನ್ನು ಕೊಲ್ಲುವುದಿಲ್ಲ!

ಸಮಾಜದ ಸ್ವಾಸ್ಥ್ಯವಿಲ್ಲದೆ ದೇಶದ ಆರ್ಥಿಕ ಪ್ರಗತಿ ಅಂಕಿಸಂಖ್ಯೆಗಳಿಗೆ ಪೂರಕವಾಗಿ ಊಹಾತ್ಮಕ ತಲಾ ಆದಾಯವನ್ನು ಹೆಚ್ಚಿಸಬಹುದೇ ಹೊರತು ತಲಾ ಸಂತೋಷವನ್ನು ಹೆಚ್ಚಿಸಲಾರದು, ಸರ್ವಾಂಗೀಣ ಅಭಿವೃದ್ಧಿಯೂ ಸಾಧ್ಯವಾಗದು. ಇದನ್ನು ಆಳುವ ವರ್ಗ ಗಮನಿಸುವುದು ಒಳಿತು.

■ ಮೂಚಿ

## ಮಾತೇ ಮುತ್ತು

★ ಬುದ್ಧಿಯೇ ಭಂಡಾರ,
ಪದವಿದ್ಯೆ ಕತ್ತಿನ ಹಾರ
ಯಶಸ್ಸು ಬಿಳಿಯ ಛತ್ರಿ,
ಸರಸ್ವತಿಯೇ ಮಹಾರಾಣಿ
ಪದ್ಯ ರಚನೆಯ ಶೈಲಿ ಭೇರಿನಾದ,
ಪಾಂಡಿತ್ಯವೇ ಸಿಂಹಾಸನ
ಕಾವ್ಯದ ಅಲಂಕಾರವೇ ಬೀಸುವ ಚಾಮರ

-ಮಹಾಕವಿ ರನ್ನ

★ ಒಬ್ಬ ಪರಿಪೂರ್ಣ ವ್ಯಕ್ತಿ ಹೊಗೆಬತ್ತಿ ಸೇದುವುದಿಲ್ಲ, ಕುಡಿಯುವುದಿಲ್ಲ, ಅಳುವುದಿಲ್ಲ, ಸೋಲುವುದಿಲ್ಲ; ಇರುವುದೂ ಇಲ್ಲ!

-ಇಂಗ್ಲಿಷ್ ನಾಣ್ನುಡಿ

★ ತುಕ್ಕು ಹಿಡಿದು ಅಳಿಯುವುದಕ್ಕಿಂತ ದುಡಿದು ಸವೆಯುವುದು ಮೇಲು.

-ಮೋಕ್ಷಗುಂಡಂ ವಿಶ್ವೇಶ್ವರಯ್ಯ

★ ಶಾಂತವಾಗಿರುವ ಸಮುದ್ರ ಅತ್ಯುತ್ತಮ ನಾವಿಕನನ್ನು ಸೃಷ್ಟಿಸುವುದಿಲ್ಲ.

-ಆಫ್ರಿಕನ್ ಗಾದೆ

★ ಹಣ ಎಂದರೆ ಉಪ್ಪು ಇದ್ದಂತೆ. ಅದನ್ನು ತುಸುವೇ ನಾಲಿಗೆ ಮೇಲೆ ಇರಿಸಿಕೊಂಡರೆ ರುಚಿ. ಹೆಚ್ಚಾಗಿ ತಿಂದರೆ ದಾಹ.

-ಶಿವರಾಮ ಕಾರಂತ

★ ಬುದ್ಧಿವಂತನೊಡನೆ ಯಾರು ಬೇಕಾದರೂ ಕೂಡಿ ಬಾಳಬಹುದು. ಆದರೆ ದಡ್ಡನೊಡನೆ ಕೂಡಿ ಬಾಳಲು ಬುದ್ಧಿವಂತೆಯೇ ಆಗಬೇಕು.

-ರುಡ್ಯಾರ್ಡ್ ಕ್ಲಿಪಿಂಗ್

★ ನಿಮ್ಮ ಅಭಿಪ್ರಾಯ ಹುಚ್ಚಾಪಟ್ಟೆ ಎಂದುಕೊಂಡು ಹೇಳದೇ ಇರಬೇಡಿ. ಇವತ್ತು ಅತ್ಯುತ್ತಮ ಎಂದುಕೊಂಡ ಅಭಿಪ್ರಾಯಗಳೆಲ್ಲ ಹಿಂದೆ ಹುಚ್ಚಾಪಟ್ಟೆ ಅನ್ನಿಸಿಕೊಂಡಿದ್ದವು.

-ಬರ್ಟ್ರಂಡ್ ರಸೆಲ್

★ ಇತಿಹಾಸವೆಂದರೆ ಸತ್ತವರ ಮೇಲೆ ಕಟ್ಟುವ ಗೋರಿಯಲ್ಲ, ಅದು ಆಳವಾದ ತತ್ವಜ್ಞಾನ.

-ಆಲೂರ ವೆಂಕಟರಾಯ

★ ಎನ್ನ ನಡೆಯೊಂದು ಪರಿ
ಎನ್ನ ನುಡಿಯೊಂದು ಪರಿ
ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯ
ನುಡಿಗೆ ತಕ್ಕ ನಡೆಯ ಕಂಡರೆ
ಕೂಡಲಸಂಗಮದೇವ ತನ್ನೊಳಗಿಪ್ಪನಯ್ಯ

-ಬಸವೇಶ್ವರ

★ ನಿಖರ ವೀಕ್ಷಣೆಯ ಸಾಮರ್ಥ್ಯವನ್ನು ಕೆಲವರು, ಅದು ತಮ್ಮ ಬಳಿ ಇಲ್ಲವಾದ್ದರಿಂದ, ಸಿನಿಕತನ ಎನ್ನುತ್ತಾರೆ.

-ಜಾರ್ಜ್ ಬರ್ನಾರ್ಡ್ ಷಾ

★ ಜನರ ಬಗ್ಗೆ ಹೆಚ್ಚು ಕುತೂಹಲ ಬೇಡ; ಆದರೆ ಅವರ ಐಡಿಯಾಗಳ ಬಗ್ಗೆ ಹೆಚ್ಚು ಕುತೂಹಲ ಇರಲಿ.

-ಮೇರಿ ಕ್ಯೂರಿ

ನಾಳೆ ಬರುವುದು ನಮಗಿಂದೇ ಬರಲಿ
ಇಂದು ಬರುವುದು ನಮಗೀಗಲೇ ಬರಲಿ
ಆಗೀಗಲೆನ್ನದಿರೊ ಚೆನ್ನಮಲ್ಲಿಕಾರ್ಜುನ

-ಅಕ್ಕಮಹಾದೇವಿ